# ವಿಜಯವಾಣಿ

ಕನ್ನಡಿಗರ ಧ್ವನಿ

22nd May 2017

**Advice to Parents from RVCE Principal**

ಎಸ್ಸೆಸ್ಸೆಲ್ಸಿ ನಂತರ ವಿದ್ಯಾರ್ಥಿಗಳು ಪಿಯುಸಿ ಅಥವಾ ಡಿಪ್ಲೊಮಾ ಕೋರ್ಸ್‌ಗಳಿಗೆ ಹೆಚ್ಚಾಗಿ ಸೇರುತ್ತಾರೆ. ಆದರೆ, ಇಂದು ಬಹುತೇಕ ಕೋರ್ಸ್‌ಗಳ ಆಯ್ಕೆ ಇವೆ. ವಿದ್ಯಾರ್ಥಿಗಳು ವಿಶಾಲವಾಗಿ ಆಲೋಚಿಸಬೇಕು.

| ಪ್ರೊ. ಕೆ.ಎನ್. ಸುಬ್ರಹ್ಮಣ್ಯ ಆರ್‌ವಿ ಇಂಜಿನಿಯರಿಂಗ್ ಕಾಲೇಜು ಪ್ರಾಂಶುಪಾಲ

## ವಿಷಯ ತಜ್ಞರ ಸಲಹೆ




ಪ್ರತಿ ವರ್ಷ ಜನವರಿ- ಜೂನ್ ಎಂದರೆ ವಿದ್ಯಾರ್ಥಿಗಳಿಗಿಂತ ಪಾಲಕರಿಗೆ ಹೆಚ್ಚಿನ ಒತ್ತಡ ಇರುತ್ತದೆ. ಮಕ್ಕಳಿಗೆ ಯಾವ ಕೋರ್ಸ್ ಕೊಡಿಸಬೇಕು? ಯಾವ ಕಾಲೇಜಿನಲ್ಲಿ ಆ ಕೋರ್ಸ್ ಲಭ್ಯವಿದೆ? ಪ್ರವೇಶ ಶುಲ್ಕವೆಷ್ಟು ಎಂಬಿತ್ಯಾದಿ ಅಂಶಗಳು ಒತ್ತಡಕ್ಕೆ ಸಿಲುಕಿಸುತ್ತವೆ. ಇಂತಹ ಒತ್ತಡಗಳ ನಿವಾರಣೆಗೆ ಸೂಕ್ತ ಮಾರ್ಗದರ್ಶನ ಅವಶ್ಯಕ. ವಿದ್ಯಾರ್ಥಿಗಳು ಮೊದಲಿಗೆ ತಮ್ಮ ಜೀವನದಲ್ಲಿ ಗುರಿ ಹೊಂದಬೇಕು. ಅದನ್ನು ಸಾಧಿಸಲು ಪ್ರಯತ್ನಿಸಬೇಕು. ತಮ್ಮ ಸ್ನೇಹಿತರ ತೆಗೆದುಕೊಂಡರು ಎಂದ ಮಾತ್ರಕ್ಕೆ ತಾವೂ ಅದೇ ಕೋರ್ಸ್ ಆಯ್ಕೆ ಮಾಡಿಕೊಳ್ಳುವುದು ತಪ್ಪು. ನೀವು ಇಂಜಿನಿಯರಿಂಗ್ ವ್ಯಾಸಂಗ ಮಾಡಲು ಬಯಸಿದರೆ, ಇಂಜಿನಿಯರಿಂಗ್ ವಿಭಾಗಗಳನ್ನು ಮೊದಲಿಗೆ ಪಟ್ಟಿ ಮಾಡಿಕೊಂಡು ಕಾಲೇಜಿಗಳಿಗೆ ಭೇಟಿ ನೀಡಬೇಕು. ಅದು ಮಾನ್ಯತೆ ಪಡೆದಿದೆಯೇ ಎಂಬುದು ಸೇರಿ ಅಲ್ಲಿನ ವಾತಾವರಣ, ಮೂಲಸೌಕರ್ಯಗಳನ್ನು ಅರಿತು ದಾಖಲಾತಿ ಪಡೆಯಬೇಕು ಎಂದು ಆರ್.ವಿ. ಇಂಜಿನಿಯರಿಂಗ್ ಕಾಲೇಜಿನ ಪ್ರೊ. ಕೆ.ಎನ್. ಸುಬ್ರಹ್ಮಣ್ಯ ಹೇಳಿದರು. ಒಂದೊಮ್ಮೆ ನೀವು ಅಂದುಕೊಂಡ ವಿಭಾಗದಲ್ಲಿ ಸೀಟು ಸಿಗಲಿಲ್ಲವಾದರೆ, ಬೇರೆ ವಿಭಾಗದಲ್ಲಿ ವ್ಯಾಸಂಗ ಮಾಡಿ. ಎಲ್ಲದಕ್ಕೂ ಸ್ಕೋಪ್ ಇದೆ ಎಂಬುದನ್ನು ಮರೆಯಬಾರದು ಎಂದರು. ನಾವು ಪಟ್ಟ ಕಷ್ಟವನ್ನು ನಮ್ಮ ಮಕ್ಕಳು ಪಡಬಾರದು ಎಂಬ ಕಾರಣಕ್ಕೆ ನಿಮ್ಮ ಆಸೆಯ ಕೋರ್ಸ್‌ಗೆ ಅವರನ್ನು ದಾಖಲಿಸುವುದು ತಪ್ಪು ಎಂದು ಪಾಲಕರಿಗೆ ತಿಳಿವಳಿಕೆ ಹೇಳಿದರು.